ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೬

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂಬತ್ತನೇ ಅಧಿವೇಶನ

## ಸೋಮವಾರ, ದಿನಾಂಕ: ೨೦ನೇ ಜುಲೈ, ೨೦೧೫

---

**ಸಮೂಹ – I**

೧. ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು
೨. ಸಾರಿಗೆ ಸಚಿವರು
೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
೪. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
೫. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು
೬. ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು

---

**ನೂತನವಾಗಿ ಮಂಜೂರಾತಿ ನೀಡಿರುವ ವಸತಿ ಶಾಲೆಗಳು**

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೨೨೬ (೧೯೦೮) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ ಹಾಗೂ ೨೦೧೪–೧೫ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನೂತನವಾಗಿ ಮಂಜೂರಾತಿ ನೀಡಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು ;

(ಆ) ವಸತಿ ಶಾಲೆಗಳ ಕೊರತೆಯ ಬಗ್ಗೆ ಇಲಾಖೆಯಿಂದ ಬಂದಿರುವ ಬೇಡಿಕೆಯನ್ನು ಈಡೇರಿಸಲು ತೆಗೆದುಕೊಂಡ ಕ್ರಮಗಳೇನು ;

(ಇ) ೨೦೧೩ ರಿಂದ ೨೦೧೫ನೇ ಸಾಲಿನವರೆಗೆ ಈ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮಂಜೂರು ಮಾಡಿರುವ ವಿವಿಧ ಯೋಜನೆಗಳಾವುವು ? (ವಿವರ ನೀಡುವುದು)

## ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ದುಸ್ಥಿತಿ ಕುರಿತು

**ಡಾ. ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೨೭ (೧೯೩೮) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳಪೆ ನಿರ್ವಹಣೆ ಮತ್ತು ಅನುದಾನದ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ವಿಫಲಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹಿಂದುಳಿದ ವರ್ಗಗಳ ನೇತಾರ ದಿವಂಗತ ಡಿ. ದೇವರಾಜ ಅರಸು ಶತಮಾನೋತ್ಸವ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ಹಿಂದುಳಿದ ವಿದ್ಯಾರ್ಥಿ ನಿಲಯಗಳಿಗೆ ಸೂಕ್ತ ಮೂಲಭೂತಸೌಕರ್ಯಗಳನ್ನು ಒದಗಿಸುವುದು ಮತ್ತು ಉತ್ತಮ ನಿರ್ವಹಣೆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಶೇಷ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ ;

(ಇ) ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಸುಸಜ್ಜಿತ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಲಾಗುವುದೇ ?

## ಅವಧಿ ಮೀರಿದ ಔಷಧ ಮಾತ್ರೆಗಳು

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೨೨೮ (೧೯೪೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡುವ ಸಲುವಾಗಿ ಎಷ್ಟು ಮೌಲ್ಯದ ಮತ್ತು ವಿವಿಧ ಔಷಧ ಹಾಗೂ ಮಾತ್ರೆಗಳನ್ನು ಸರ್ಕಾರ ಖರೀದಿಸಿದೆ ; (ಕಳೆದ ೨ ವರ್ಷಗಳ ವಿವರ ನೀಡುವುದು)

(ಆ) ಸರಬರಾಜು ಮಾಡದೆ ಉಗ್ರಾಣದಲ್ಲಿಯೇ ಉಳಿದ ಔಷಧ ಮಾತ್ರೆಗಳ ಮೌಲ್ಯ ಎಷ್ಟು ; (ಕಳೆದ ೨ ವರ್ಷಗಳ ವಿವರ ನೀಡುವುದು)

(ಇ) ಅವಧಿ ಮೀರಿದ (Expiry Date) ಔಷಧ ಮತ್ತು ಮಾತ್ರೆಗಳ ಮೌಲ್ಯ ಎಷ್ಟು ; (ಕಳೆದ ೨ ವರ್ಷಗಳ ವಿವರ ನೀಡುವುದು)

(ಈ) ಅವಧಿ ಮೀರಿದ ಔಷಧ ಮಾತ್ರೆಗಳನ್ನು ಎಲ್ಲೆಲ್ಲಿ ನಾಶ (Destroy) ಮಾಡಲಾಗಿದೆ? (ಕಳೆದ ೨ ವರ್ಷಗಳ ವಿವರ ನೀಡುವುದು)

## ಮೂತ್ರಪಿಂಡ ವೈಫಲ್ಯ ಚಿಕಿತ್ಸೆ ದುಬಾರಿಯಾಗಿರುವ ಕುರಿತು

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೨೯ (೧೪೦೫) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೂತ್ರಪಿಂಡ ವೈಫಲ್ಯದಂತಹ ಸಮಸ್ಯೆಯಿಂದ ಬಳಲುತ್ತಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಬರುತ್ತಿರುವ ರೋಗಿಗಳ ಅಂದಾಜು ಮಾಹಿತಿ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಕಳೆದ ೩ ವರ್ಷಗಳ ಅವಧಿಯ ಮಾಹಿತಿ ಒದಗಿಸುವುದು ;

(ಆ) ರಾಜ್ಯದಲ್ಲಿ ಮೂತ್ರಪಿಂಡ ವೈಫಲ್ಯದಿಂದ ಸಾವನ್ನಪ್ಪುತ್ತಿರುವವರ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳ ಅವಧಿಯ ಮಾಹಿತಿ ಒದಗಿಸುವುದು ;

(ಇ) ಈ ರೋಗಿಗಳ ಚಿಕಿತ್ಸೆ, ಶಸ್ತ್ರ ಚಿಕಿತ್ಸೆಯಂತಹ ಸೇವೆಗಳನ್ನು ಒದಗಿಸುತ್ತಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಎಷ್ಟು ; ಅವುಗಳು ಯಾವುವು ; ಶಸ್ತ್ರ ಚಿಕಿತ್ಸೆಯಂತಹ ಸೇವೆ ಪಡೆಯಲು ತಗಲುವ ವೆಚ್ಚ ಎಷ್ಟು ; (ಮಾಹಿತಿ ನೀಡುವುದು)

(ಈ) ಚಿಕಿತ್ಸೆ ದುಬಾರಿಯಾಗಿರುವುದರಿಂದ ಮಧ್ಯದಲ್ಲಿಯೇ ಚಿಕಿತ್ಸೆ ನಿಲ್ಲಿಸಿ, ಮರಣವನ್ನಪ್ಪುವ ಆರ್ಥಿಕ ದುರ್ಬಲರ ಹಿತದೃಷ್ಟಿಯ ನಿಟ್ಟಿನಲ್ಲಿ ಸರ್ಕಾರದ ಚಿಂತನೆ ಏನು ; (ಮಾಹಿತಿ ಒದಗಿಸುವುದು)

## ಹಿಂದುಳಿದ ವರ್ಗಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಾಣ ಮಾಡುವ ಕುರಿತು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೩೦ (೧೯೨೭) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹೆಚ್ಚುವರಿ ಹಾಸ್ಟೆಲ್ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಘೋಷಣೆ ಮಾಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಎಷ್ಟು ಹಾಸ್ಟೆಲ್‌ಗಳ ಕಟ್ಟಡಗಳನ್ನು ಇದುವರೆವಿಗೆ ನಿರ್ಮಾಣ ಮಾಡಲಾಗಿದೆ ; ಅವು ಯಾವ ಹಂತದಲ್ಲಿವೆ ; ಯಾವ ಸ್ಥಳದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ? (ಪೂರ್ಣ ವಿವರ ನೀಡುವುದು)

## ಹಿಂದುಳಿದ ವರ್ಗಗಳ ಮಕ್ಕಳಿಗೆ ಶುಲ್ಕ ವಿನಾಯಿತಿ ಯೋಜನೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೩೧ (೧೩೯೯) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಮಕ್ಕಳಿಗೆ ಸರ್ಕಾರವು ಶುಲ್ಕ ವಿನಾಯಿತಿ ನೀಡುತ್ತಿದ್ದು, ಅನುದಾನದ ಕೊರತೆಯಿಂದ ತೊಂದರೆ ಎದುರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ೨೦೧೧–೧೨, ೨೦೧೨–೧೩, ೨೦೧೩–೧೪ ಹಾಗೂ ೨೦೧೪–೧೫ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; ಸದರಿ ಯೋಜನೆಯಡಿಯಲ್ಲಿ ಒಳಪಡುವ ಹಿಂದುಳಿದ ವರ್ಗಗಳು ಯಾವುವು ;

(ಇ) ಬೆಳಗಾವಿ ಜಿಲ್ಲೆಯಲ್ಲಿ ೨೦೧೧-೧೨, ೨೦೧೨-೧೩, ೨೦೧೩-೧೪ ಹಾಗೂ ೨೦೧೪-೧೫ನೇ ಸಾಲಿನಲ್ಲಿ ಶುಲ್ಕ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆದಿರುತ್ತಾರೆ ; ಶುಲ್ಕ ವಿನಾಯಿತಿ ಪಡೆಯದೆ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವರ್ಗವಾರು, ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಶುಲ್ಕ ವಿನಾಯಿತಿ ಪಡೆಯದೆ ಇರುವ ವಿದ್ಯಾರ್ಥಿಗಳಿಗೆ ಯಾವ ಕಾಲಮಿತಿಯಲ್ಲಿ ಶುಲ್ಕ ನೀಡಲು ಕ್ರಮ ಕೈಗೊಳ್ಳಲಾಗುವುದು ?

## ಬ್ಯಾಡಗಿ ತಾಲ್ಲೂಕಿನ ನೂತನ ಆಸ್ಪತ್ರೆ ಕಟ್ಟಡ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೨೩೨ (೧೮೮೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬ್ಯಾಡಗಿಯಲ್ಲಿ ನೂತನ ತಾಲ್ಲೂಕು ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಯಾರಿಗೆ ಎಷ್ಟು ಮೊತ್ತಕ್ಕೆ ಯಾವಾಗ ಗುತ್ತಿಗೆ ನೀಡಲಾಗಿದೆ ; ಕಾಮಗಾರಿಯ ಗುಣಮಟ್ಟ ಹೇಗಿದೆ ; ಇಲ್ಲಿಯ ಸಮುದಾಯ ಆರೋಗ್ಯ ಕೇಂದ್ರದ ಸ್ಥಿತಿ ಗತಿ ಹೇಗಿದೆ ; (ಮಾಹಿತಿ ಒದಗಿಸುವುದು)

(ಆ) ಈ ಕಟ್ಟಡದ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕಾಗಿದೆ ; ವಿಳಂಬಕ್ಕೆ ಕಾರಣವೇನು ;

(ಇ) ಪ್ರಸ್ತುತ ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ; ಈವರೆಗೆ ಖರ್ಚಾಗಿರುವ ಹಣ ಎಷ್ಟು ; ಪೂರ್ಣ ಹಣ ಬಿಡುಗಡೆ ಮಾಡದಿರಲು ಕಾರಣವೇನು ? (ವಿವರ ನೀಡುವುದು)

## ಜೀವ ರಕ್ಷಕ ಔಷಧಿಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೨೩೩ (೧೯೧೪) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವ ರಕ್ಷಕ ಔಷಧಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಜೀವ ರಕ್ಷಕ ಔಷಧಿಗಳ ಕೊರತೆಯಿಂದ ಜನರ ಪ್ರಾಣಕ್ಕೆ ಕಂಟಕವಾದರೆ ಹೊಣೆ ಯಾರು ;

(ಇ) ಜೀವ ರಕ್ಷಕ ಔಷಧಿಗಳ ಪೂರೈಕೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ?

## ರಾಜ್ಯದಲ್ಲಿ ಅಪಘಾತಕ್ಕೀಡಾದ ಬಸ್ಸುಗಳ ಸಂಖ್ಯೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೨೩೪ (೧೯೦೨) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಪಘಾತಕ್ಕೀಡಾದ ಬಸ್ಸುಗಳ ಸಂಖ್ಯೆ ಎಷ್ಟು ; ಅಪಘಾತದಲ್ಲಿ ಮೃತಪಟ್ಟ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು ; (ವರ್ಷವಾರು, ಪ್ರಕರಣವಾರು ವಿವರ ನೀಡುವುದು)

(ಆ) ಮೃತಪಟ್ಟವರಿಗೆ ಇಲಾಖೆಯಿಂದ ಎಷ್ಟು ಹಣವನ್ನು ಪರಿಹಾರವಾಗಿ ನೀಡಲಾಗಿದೆ ; ಗಾಯಗೊಂಡವರಿಗೆ ನೀಡಿದ ಪರಿಹಾರ ಹಣ ಎಷ್ಟು ; (ಪ್ರಕರಣವಾರು ವಿವರ ನೀಡುವುದು)

(ಇ) ಅಪಘಾತದ ಸಂದರ್ಭದಲ್ಲಿ ವಾಹನ ಚಲಾಯಿಸುತ್ತಿದ್ದ ಚಾಲಕರ ವಿರುದ್ಧ ಕೈಗೊಂಡ ಕ್ರಮಗಳೇನು ; ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಚಾಲಕರ ಸಂಖ್ಯೆ ಎಷ್ಟು ; ಇಲ್ಲದಿದ್ದರೆ, ಕಾರಣಗಳೇನು ?

## ಪಂಚಕರ್ಮ ವಿಭಾಗಕ್ಕೆ ಮಸಾಜಿಸ್ಟ್‌ಗಳ ನೇಮಕ ಕುರಿತು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–**

೨೩೫ (೧೪೦೭) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಬೆಂಗಳೂರು ಇಲ್ಲಿ ಪಂಚಕರ್ಮ ವಿಭಾಗಕ್ಕೆ ಪ್ರತಿ ದಿನ ಸುಮಾರು ೧೦೦ ಜನ ಹೊರರೋಗಿಗಳು ಬರುತ್ತಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಪಂಚಕರ್ಮ ವಿಭಾಗದಲ್ಲಿ ಕೇವಲ ೨ ಜನ ಬಾಡಿ ಮಸಾಜಿಸ್ಟ್‌ಗಳು ಇರುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ೧೦೦ ಜನ ಹೊರರೋಗಿಗಳಿಗೆ ಇಬ್ಬರೆ ಮಸಾಜಿಸ್ಟ್‌ಗಳು ಕಾರ್ಯ ನಿರ್ವಹಿಸುವರೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಕೂಡಲೇ ಮಸಾಜಿಸ್ಟ್‌ಗಳನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

## ಮೊರಾರ್ಜಿ ಹಾಗೂ ಕಿತ್ತೂರು ಚೆನ್ನಮ್ಮ ಶಾಲಾ ಶಿಕ್ಷಕರ ಕುರಿತು

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ) –**

೨೩೬ (೧೮೭೮) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಮೊರಾರ್ಜಿ, ಕಿತ್ತೂರು ಚೆನ್ನಮ್ಮ ಹಾಗೂ ಇನ್ನಿತರೆ ಶಾಲೆಗಳ ಶಿಕ್ಷಕರುಗಳ ಪ್ರೊಬೇಷನರಿ ಘೋಷಣೆ ಮಾಡಲಾಗಿದೆಯೇ ; ಇಲ್ಲವಾದಲ್ಲಿ, ಕಾರಣವೇನು ; (ವಿವರ ನೀಡುವುದು)

(ಆ) ಎಷ್ಟು ಜನ ಶಿಕ್ಷಕರನ್ನು ಹಾಗೂ ಯಾರ್ಯಾರನ್ನು N.P.S. ಅಡಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ; (ಪ್ರತಿಯೊಬ್ಬರ ವಿವರ ನೀಡುವುದು)

(ಇ) ಕಳೆದ ೦೨ ವರ್ಷಗಳಲ್ಲಿ ಯಾವ ಯಾವ ಶಿಕ್ಷಕರಿಗೆ ವೈದ್ಯಕೀಯ ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗಿದೆ ;

(ಈ) ಇಲ್ಲಿಯವರೆಗೆ ಎಷ್ಟು ಜನ ಸಿಬ್ಬಂದಿ ಸಾವನ್ನಪ್ಪಿದ್ದಾರೆ ; ಅವರ ಕುಟುಂಬದ ಸದಸ್ಯರಿಗೆ ಒದಗಿಸಿದ ಸೌಲಭ್ಯಗಳು ಹಾಗೂ ಪರಿಹಾರ ಏನು ? (ಸಂಪೂರ್ಣ ವಿವರ ನೀಡುವುದು)

## ಅನುಸೂಚಿತ ಜಾತಿ/ಪಂಗಡಗಳ ರಿಯಾಯಿತಿ ಶುಲ್ಕವನ್ನು ಕಾಲೇಜುಗಳಿಗೆ ಪಾವತಿಸುವುದು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) –**

೨೩೭ (೧೪೦೪) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದ ಇಂಜಿನಿಯರಿಂಗ್, ಮೆಡಿಕಲ್, ಡೆಂಟಲ್, ಆರ್ಕಿಟೆಕ್ಚರ್ ಮತ್ತಿತರ ಪದವಿ ಕಾಲೇಜುಗಳಲ್ಲಿ ಅನುಸೂಚಿತ ಜಾತಿ/ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ರಿಯಾಯ್ತಿ ಹಣವನ್ನು ಕಾಲೇಜುಗಳಿಗೆ ಮರುಪಾವತಿ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಕಾಲೇಜುಗಳಿಗೆ ಮರುಪಾವತಿ ಮಾಡಲಾಗಿದೆ ; (ಕಾಲೇಜುವಾರು ವಿವರ ನೀಡುವುದು)

(ಆ) ಇನ್ನೂ ಹಣ ಪಾವತಿ ಮಾಡಬೇಕಾಗಿರುವ ಕಾಲೇಜುಗಳು ಎಷ್ಟು ; ಮರುಪಾವತಿ ಮಾಡದಿರಲು ಕಾರಣವೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಭ್ರೂಣ ಲಿಂಗ ಪತ್ತೆ ಮತ್ತು ದುರ್ಬಳಕೆ ನಿಷೇದ ಸಮಿತಿಯ ಪುನರ್ ರಚನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೨೩೮ (೧೮೯೭) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭ್ರೂಣ ಲಿಂಗ ಪತ್ತೆ ಮತ್ತು ದುರ್ಬಳಕೆ ನಿಷೇಧ ಸಮಿತಿಯನ್ನು ಪುನರ್ ರಚನೆ ಮಾಡಲಾಗಿರುವುದು ನಿಜವೇ ;

(ಆ) ಈ ಹಿಂದೆ ಇದ್ದ ಸಮಿತಿಯ ವಿವರ ಹಾಗೂ ಈಗ ಪುನರ್ ರಚನೆ ಮಾಡಲಾಗಿರುವ ಸಮಿತಿಯ ವಿವರ ನೀಡುವುದು ;

(ಇ) ಭ್ರೂಣ ಲಿಂಗ ಪತ್ತೆ ಮತ್ತು ದುರ್ಬಳಕೆ ನಿಷೇಧ ಕಾಯ್ದೆಯ ಪ್ರಕಾರ ಯಾವ ರೀತಿಯ ವ್ಯಕ್ತಿಗಳು ಹಾಗೂ ಎಷ್ಟು ವ್ಯಕ್ತಿಗಳು ಸಮಿತಿಯಲ್ಲಿರಬೇಕು ;

(ಈ) ಪುನರ್ ರಚನಾ ಸಮಿತಿಯ ನೇಮಕಾತಿಯಲ್ಲಿ ಸದರಿ ಕಾಯ್ದೆಯ ಉಲ್ಲಂಘನೆಯಾಗಿರುವುದು ನಿಜವೇ ; ನಿಜವಾಗಿದ್ದಲ್ಲಿ, ಕಾರಣವೇನು ; ಹಾಗಿದ್ದಲ್ಲಿ, ಸರಿಪಡಿಸಲು ಸರ್ಕಾರ ಮುಂದಾಗುವುದೇ ?

**ಶಾಲಾ ಮಕ್ಕಳ ಬಸ್ ಮತ್ತು ವ್ಯಾನ್‌ಗಳಲ್ಲಿನ ಸುರಕ್ಷತೆ ಕುರಿತು**

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೨೩೯ (೧೯೨೮) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನಲ್ಲಿ ಶಾಲಾ ಮಕ್ಕಳ ಸಂಚಾರಕ್ಕಾಗಿ ಖಾಸಗಿ ಶಾಲೆಗಳೊಂದಿಗೆ ಬಾಡಿಗೆ ರೂಪದಲ್ಲಿ ಒಪ್ಪಂದ ಮಾಡಿಕೊಂಡ ಬಿ.ಎಂ.ಟಿ.ಸಿ. ಬಸ್ಸುಗಳ ಸಂಖ್ಯೆ ಎಷ್ಟು ; ಯಾವ ಯಾವ ಶಾಲೆಗಳಿಗೆ ಸರ್ಕಾರಿ ವಾಹನಗಳ ಸಾರಿಗೆ ಅನುಕೂಲ ಮಾಡಲಾಗಿದೆ ; ಪ್ರತಿ ಕಿ.ಮೀ.ಗೆ ನಿಗದಿಪಡಿಸಿರುವ ಬಾಡಿಗೆ ದರವೆಷ್ಟು ;

(ಆ) ಬೆಂಗಳೂರು ಮತ್ತು ರಾಜ್ಯದ ಇತರೆ ನಗರಗಳಲ್ಲಿ ಶಾಲಾ ಮಕ್ಕಳ ಸಂಚಾರಕ್ಕೆ ಬಳಕೆ ಮಾಡುವ ವಾಹನಗಳು (ಸರ್ಕಾರಿ ವಾಹನಗಳು ಸೇರಿದಂತೆ) ಮಕ್ಕಳ ಸುರಕ್ಷತೆಗಾಗಿ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸದೆ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಇದುವರೆವಿಗೂ ಇಂತಹ ಎಷ್ಟು ವಾಹನಗಳನ್ನು ಪತ್ತೆ ಹಚ್ಚಲಾಗಿದೆ; ಸದರಿ ವಾಹನಗಳು ಯಾವ ಶಾಲೆಗಳಿಗೆ ಸೇರಿವೆ ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಗಮನಹರಿಸದವರ ವಿರುದ್ಧ ಸರ್ಕಾರ ಕೈಗೊಳ್ಳುವ ಶಿಸ್ತಿನ ಕ್ರಮವೇನು ?

**ಬೈಲಹೊಂಗಲ ಘಟಕದ ಬಸ್ ನಿಲ್ದಾಣವನ್ನು ನವೀಕೃತಗೊಳಿಸುವ ಬಗ್ಗೆ**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೨೪೦ (೧೮೯೧) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರವು ಕಂದಾಯ, ವಾಣಿಜ್ಯ ಮತ್ತು ಪೊಲೀಸ್ ಉಪವಿಭಾಗದ ಕೇಂದ್ರ ಸ್ಥಳವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗದ ಬೈಲಹೊಂಗಲ ಘಟಕದ ಬಸ್ ಸ್ಟ್ಯಾಂಡ್‌ನ್ನು ನವೀಕರಣ ಮಾಡುವ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬೈಲಹೊಂಗಲ ಬಸ್ ನಿಲ್ದಾಣವನ್ನು ಸುಧಾರಿಸುವ ಬದಲು ಅಂಗಡಿಗಳನ್ನು ಕಟ್ಟಿ ಬಸ್ ನಿಲ್ದಾಣದಲ್ಲಿ ಬಸ್ಸುಗಳು ನಿಲ್ಲದಂತೆ ಮಾಡಿ, ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಬದಲು ಸಾರ್ವಜನಿಕರಿಗೆ ಅನಾನುಕೂಲ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮಳೆಗಾಲದಲ್ಲಿ ಬಸ್ ನಿಲ್ದಾಣದಲ್ಲಿ ನೀರು ನಿಂತು ಪ್ರವಾಸಿಗರಿಗೆ ಅನಾನುಕೂಲ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬೈಲಹೊಂಗಲ ಘಟಕದಿಂದ ಬೈಲಹೊಂಗಲ–ಬೆಂಗಳೂರು, ಬೈಲಹೊಂಗಲ–ಮುಂಬೈ, ಬೈಲಹೊಂಗಲ–ಪುಣೆ, ಲಗ್‌ಜೂರಿ (Laxury) ಬಸ್ ಓಡಿಸುವ ಬದಲು ಖಾಸಗಿಯವರಿಗೆ ಅನುಕೂಲ ಮಾಡಿಕೊಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕ್ರಮ ಕೈಗೊಳ್ಳಲಾಗುವುದು ಯಾವಾಗ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾ.ಸೂ. , ಪ್ರತಿಗಳು 1500